OS No. 43/2022

DW-1

**(ಇಂದು ದಿಃ 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ.MG ವಕೀಲರಿಂದಃ-</u>**

ವಾದಿ ನನ್ನ ತಂಗಿ. ನಾನು ಮತ್ತು ವಾದಿ ಒಬ್ಬಳು ತಾಯಿ ಮಕ್ಕಳು ಎಂದರೆ ಸರಿ. ನನ್ನ ತಾಯಿಗೆ ಸಹೋದರರು ಮತ್ತು ಸಹೋದರಿಯರು ಇಲ್ಲ. ದಾವಾ ಸ್ವತ್ತು ನನ್ನ ತಾಯಿಯ ಕಡೆಯಿಂದ ನನ್ನ ಮುತ್ಯಾನ ಆಸ್ತಿಎ ಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮುತ್ಯಾ ಅಂದರೆ ನನ್ನ ತಾಯಿಯ ತಂದೆ ಆಸ್ತಿ ಎಂದು ಹೇಳುತ್ತಾರೆ. ನನ್ನ ತಾಯಿ ಯ ತಂದೆ ಭೀಮಷಪ್ಪ . ದಾವಾ ಸ್ವತ್ತುಗಳು ಮುಂಚೆ ಸದರಿ ಭೀಮಷಪ್ಪನ ಹೆಸರಿನಲ್ಲಿದ್ದವು. ಸದರಿ ಆಸ್ತಿಗಳು ದಾಖಲಾತಿಗಳಲ್ಲಿ ನನ್ನ ತಾಯಿಯ ಹೆಸರು ಕೂಡ ಬಂದಿತ್ತು ಎಂದರೆ ಸರಿಯಲ್ಲ. ಜಮೀನನ್ನು ನನ್ನ ಹೆಸರಿಗೆ ಮಾಡಿಕೊಳ್ಳುವಾಗ ವಾದಿಯ ಸಹಿ ಪಡೆದಿಲ್ಲ. ಭೀಮಷಪ್ಪನಿಂದ ನಮ್ಮ ಹೆಸರಿಗೆ ಆಗುವಾಗ ಭೀಮಷಪ್ಪ ನನ್ನ ಹೆಸರಿಗೆ ಯಾವುದೇ ನೋಂದಾಯಿತ ದಾಖಲಾತಿ ಬರೆದುಕೊಟ್ಟಿಲ್ಲ. ನಾನು ಮತ್ತು 2 ನೇ ಪ್ರತಿವಾದಿ ಜಮೀನುಗಳನ್ನು ನಮ್ಮ ಹೆಸರಿಗೆ ಮಾಡಿಕೊಳ್ಳುವಾಗ ವಾದಿಯ ಸಹಿ ಪಡೆದಿಲ್ಲ.

ನನ್ನ ಮುತ್ಯಾ ಭೀಮಷಪ್ಪ ನನ್ನನ್ನು ದತ್ತು ಪಡೆದುಕೊಂಡಿದ್ದರು ಎಂಬ ಬಗ್ಗೆ ನೋಂದಾಯಿತ ದಾಖಲಾತಿ ಆಗಿಲ್ಲ. ನಾನು ಮೋನಪ್ಪನನ್ನು ದತ್ತಕ ಪಡೆದುಕೊಂಡಿದ್ದೇನೆ. ಆ ಬಗ್ಗೆ ನೋಂದಾಯಿತ ದಾಖಲಾತಿ ಆಗಿಲ್ಲ. ವಾದಿ ಹಬ್ಬ ಜಾತ್ರೆಗೆ ಮತ್ತು ಕೆಟ್ಟದ್ದಕ್ಕೆ ತವರಿಗೆ ಬಂದು ಹೋಗುತ್ತಾಳೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸಾಯಬು ತಂದೆ ಭೀಮಷಪ್ಪರವರಿಗೆ ಮಾರಾಟ ಮಾಡುವಾಗ ನಾನು ತಕರಾರು ಮಾಡಿಲ್ಲ. ವಾದಿ ತವರಿಗೆ ಬಂದು ಹೋಗುತ್ತಿದ್ದರು ಮತ್ತು ಅವಳಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಇದ್ದರು ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್**

**ನ್ಯಾಯಾಧೀಶರು,ಸೇಡಂ.**

OS No. 43/2022

DW-1